ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಆಯುಕ್ತರವರ ಕಛೇರಿ, ಗ್ರಾ.ಕು.ನೀ.&ನೈ.ಇ., 2ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ,
ಬೆಂಗಳೂರು – 560 009. ☎ : 080-22240508 : 22240509 ಈ-ಮೇಲ್: krwssd@gmail.com

ನಂ. ಗ್ರಾಕುನೀ&ನೈಇ/05/ಲೆಕ್ಕ/2019 ದಿನಾಂಕ: 24-05-2019

# ಅಧಿಕೃತ ಜ್ಞಾಪನ

**ವಿಷಯ:-** ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ 2019-20ನೇ ಸಾಲಿಗೆ ರಾಜ್ಯದಪಾಲಿನ **C&Q** ಮತ್ತು **MVS ಘಟಕದಡಿ** ಅನುದಾನ ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:-**
1) ಸರ್ಕಾರದ ಆದೇಶ ಸಂ.ಗ್ರಾಅಪ/49/ಗ್ರಾಕುನೀ&ನೈಇ/ಲೆಶಾ/2018, ಬೆಂಗಳೂರು, ದಿನಾಂಕ 29-11-2018.
2) ಸರ್ಕಾರದ ಆದೇಶ ಸಂ.ಗ್ರಾಅಪ/48/ಗ್ರಾಕುನೀ&ನೈಇ/ಲೆಶಾ/2018, ಬೆಂಗಳೂರು, ದಿನಾಂಕ 29-11-2018.

---

ಮೇಲ್ಕಂಡ ಉಲ್ಲೇಖ (1) ಮತ್ತು (2) ರಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ 2018-19ನೇ ಸಾಲಿನ ಲೆಕ್ಕ ಶೀರ್ಷಿಕೆ 2215-01-102-9-08 ಅಡಿ ಕೇಂದ್ರದ ಪಾಲಿನ ಒಂದನೇ ಕಂತಿನ ಬಾಕಿ ಅನುದಾನ, ರಾಜ್ಯದ ಪಾಲನ್ನು ಒಳಗೊಂಡಂತೆ ಒಟ್ಟು ರೂ.27689.26 ಲಕ್ಷಗಳನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಈಗಾಗಲೇ ಬಿಡುಗಡೆಗೊಳಿಸಲಾಗಿರುತ್ತದೆ.

ಗ್ರಾಮೀಣ ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಠಾನಕ್ಕಾಗಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಳಿಂದ ಬೇಡಿಕೆ ಸ್ವೀಕೃತವಾಗಿದ್ದು, ಅದಕ್ಕಾಗಿ ಲಭ್ಯವಿರುವ ಅನುದಾನದಲ್ಲಿ ಹಂಚಿಕೆ ಮಾಡಲು ತೀರ್ಮಾನಿಸಲಾಗಿರುತ್ತದೆ.

ಮುಂದುವರೆದು, ಸದರಿ ಅನುದಾನದಲ್ಲಿ ಪ್ರಸ್ತುತ ಗ್ರಾಮೀಣ ಕುಡಿಯುವ ನೀರು ಯೋಜನೆಯ C&Q ಮತ್ತು MVS ಘಟಕಗಳಡಿ ರಾಜ್ಯದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಳಿಗೆ ಕುಡಿಯುವ ನೀರಿನ ಕಾಮಗಾರಿಗಳಿಗಾಗಿ **ಒಟ್ಟು ರೂ.866.30 ಲಕ್ಷಗಳ** ಅನುದಾನವನ್ನು ಅನುಬಂಧ-01 ಮತ್ತು 02 ರಲ್ಲಿರುವಂತೆ ಬಿಡುಗಡೆ ಮಾಡಲು ತೀರ್ಮಾನಿಸಲಾಗಿರುತ್ತದೆ. ಆದ್ದರಿಂದ, ಈ ಕೆಳಕಂಡ ಆದೇಶ.

# ಆದೇಶ

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ 2019-20ನೇ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮದ (NRDWP) ಕುಡಿಯುವ ನೀರಿನ ಯೋಜನೆಗಳಿಗಾಗಿ MVS ಘಟಕದ ಎಸ್.ಸಿ.ಪಿ. ಲೆಕ್ಕ ಶೀರ್ಷಿಕೆ 2215-01-102-9-08-422 ಅಡಿ **ರಾಜ್ಯದ ಪಾಲಿನ ಒಟ್ಟು ರೂ.749.13 ಲಕ್ಷಗಳನ್ನು ಅನುಬಂದ-01 ರಂತೆ,** C&Q, WPP ಘಟಕದ ಎಸ್.ಸಿ.ಪಿ ಲೆಕ್ಕ ಶೀರ್ಷಿಕೆ 2215-01-102-9-08-422 ಅಡಿ ಒಟ್ಟು **ರಾಜ್ಯದ ಪಾಲಿನ ಒಟ್ಟು ರೂ.117.17 ಲಕ್ಷಗಳನ್ನು ಅನುಬಂದ-02** ರಂತೆ **ಒಟ್ಟಾರೆ ರೂ.866.30 ಲಕ್ಷಗಳ** ಅನುದಾನವನ್ನು ಅನುಬಂಧಗಳಲ್ಲಿ ತೋರಿಸಿರುವಂತೆ ರಾಜ್ಯದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳಿಗೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಈ ಆದೇಶದ ಅನುಬಂಧ–1 ಮತ್ತು 2 ರಲ್ಲಿ General ಅಡಿ ಬಿಡುಗಡೆಯಾದ ಅನುದಾನವನ್ನು ಲೆಕ್ಕ ಶೀರ್ಷಿಕೆ 2215–01–102–9–08–132 ಅಡಿ, SCP ಅಡಿ ಬಿಡುಗಡೆಯಾದ ಅನುದಾನವನ್ನು ಲೆಕ್ಕ ಶೀರ್ಷಿಕೆ 2215–01–102–9–08–422 ಹಾಗೂ TSP ಅಡಿ ಬಿಡುಗಡೆಯಾದ ಅನುದಾನವನ್ನು ಲೆಕ್ಕ ಶೀರ್ಷಿಕೆ 2215–01–102–9–08–423 ಅಡಿ ವೆಚ್ಚ ಭರಿಸತಕ್ಕದ್ದು.

3. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು RTGS ಮುಖೇನ ಈಗಾಗಲೇ ಗೊತ್ತುಪಡಿಸಿರುವ SWSM ಬ್ಯಾಂಕ್ ಮೂಲ ಉಳಿತಾಯ ಖಾತೆ ಸಂಖ್ಯೆ: 04462010091577 ಮುಖಾಂತರ ವಿನಿಯೋಗಿಸತಕ್ಕದ್ದು.

4. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಕರ್ನಾಟಕ ಪಾರದರ್ಶಕ ಕಾಯ್ದೆ–1999 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು–2000, ಕರ್ನಾಟಕ ಆರ್ಥಿಕ ಸಂಹಿತೆ–1958 ಹಾಗೂ ಚಾಲ್ತಿ ಇರುವ ಇಲಾಖಾ ಇತರೆ ನಿಯಮಗಳು / ಕಾಯ್ದೆಗಳನ್ವಯ ಖರ್ಚು ಭರಿಸತಕ್ಕದ್ದು.

5. ರಾಜ್ಯ ಮಟ್ಟದಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ SWSM ನ ಮೂಲ ಉಳಿತಾಯ ಖಾತೆ ಸಂಖ್ಯೆ: 04462010091577 ಯಿಂದ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳ ಮೇಲುರುಜುವಿನೊಂದಿಗೆ ಆಯಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಗ್ರಾಮೀಣ ಕುಡಿಯುವ ನೀರು ಯೋಜನೆಯಡಿ ಸಾಮಾನ್ಯ, ಎಸ್.ಸಿ.ಪಿ. ಹಾಗೂ ಟಿ.ಎಸ್.ಪಿ. ಅಡಿ ಬಿಲ್ಲುಗಳನ್ನು ಕಳುಹಿಸುವ ಮೊದಲು ಇಲಾಖಾ ಪಂಚತಂತ್ರದ ತಂತ್ರಾಂಶದಲ್ಲಿ (ಗಾಂಧಿ ಸಾಕ್ಷಿ ಕಾಯಕಲ್ಪ) ವಿವರಗಳನ್ನು ದಾಖಲಿಸಬೇಕು. ತದನಂತರ ಬ್ಯಾಂಕ್ ಬಿಲ್ಲಿನ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕದಲ್ಲಿ ದಾಖಲಿಸಿರುವ ಬಗ್ಗೆ ಖಾತ್ರಿಪಡಿಸಿಕೊಂಡು, ಈ ಆದೇಶದಲ್ಲಿ ಸಂಬಂಧಿಸಿದ ಜಿಲ್ಲಾವಾರು / ವಿಭಾಗವಾರು ಬಿಡುಗಡೆ ಮಾಡಿರುವ ಅನುದಾನದ ಮಿತಿಯೊಳಗೆ ಮಾನ್ಯ ಮಾಡಲು ಸಿಂಡಿಕೇಟ್ ಬ್ಯಾಂಕ್ – ರಾಜ್ಯ ಮಟ್ಟದಲ್ಲಿ ಕ್ರಮವಹಿಸತಕ್ಕದ್ದು. ಹಾಗೂ IMIS ನಲ್ಲಿ ವೆಚ್ಚ ದಾಖಲಿಸಬೇಕು. ಇದನ್ನು ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಪರಿವೀಕ್ಷಿಸಿ ದೃಢೀಕರಿಸಬೇಕು.

6. ಬ್ಯಾಂಕ್‌ಗೆ ಕಳುಹಿಸುವ ಆರ್.ಟಿ.ಜಿ.ಎಸ್. ನಮೂನೆಯಲ್ಲಿ **ಸಂಬಂಧಿಸಿದ ಘಟಕಗಳ ಹೆಸರನ್ನು** ನಮೂದಿಸತಕ್ಕದ್ದು ಹಾಗೂ ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಈಗಾಗಲೇ ಅನುಮೋದನೆಯಾಗಿ ಕ್ರಿಯಾ ಯೋಜನೆಯಡಿ ಸೇರ್ಪಡಿಸಲ್ಪಟ್ಟಿರುವ ಮುಂದುವರಿದಿರುವ / ಪೂರ್ಣಗೊಂಡಿರುವ / ಪೂರ್ಣಗೊಳಿಸಬೇಕಾಗಿರುವ ಕುಡಿಯುವ ನೀರಿನ ಯೋಜನೆಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು.

7. ಆಯಾಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನಕ್ಕೆದುರಾಗಿ ಸಂಬಂಧಪಟ್ಟ ಕಾಮಗಾರಿಗಳ ಅನುಷ್ಠಾನದ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು IMIS ನಲ್ಲಿ ಪ್ರತಿ ಮಾಹೆ 10ನೇ ದಿನಾಂಕದೊಳಗೆ ಇಂದೀಕರಿಸತಕ್ಕದ್ದು. ಹಾಗೂ ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ ಇವರು ಸಂಬಂಧಿಸಿದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು IMIS ನಲ್ಲಿ ಇಂದೀಕರೀಸಿದ ಮಾಹಿತಿಯನ್ನು ಪರಿಶೀಲಿಸತಕ್ಕದ್ದು.

8. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ.&.ನೈ. ಇಲಾಖೆ ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನವನ್ನು IMIS ನಲ್ಲಿ ಇಂದೀಕರಿಸತಕ್ಕದ್ದು.

9. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣದಲ್ಲೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಕ್ರಮ ವಹಿಸತಕ್ಕದ್ದು. ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡಿ ವರದಿ ಮಾಡತಕ್ಕದ್ದು.

ಆಯುಕ್ತರು,
ಗ್ರಾ. ಕು. ನೀ. &. ನೈ. ಇಲಾಖೆ, ಬೆಂಗಳೂರು.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು–1), ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು–2), ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು–1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, 1ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕಾವೇರಿಭವನ, ಬೆಂಗಳೂರು.
6. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್), ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
12. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
13. ಮುಖ್ಯ ಲೆಕ್ಕಾಧಿಕಾರಿಗಳು, RDW&SD ಕೇಂದ್ರ ಕಛೇರಿ, ಬೆಂಗಳೂರು.
14. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು.
15. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
16. ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು.
17. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ, 4 ವೃತ್ತ ಕಛೇರಿಗಳು
18. ಸಂಬಂಧಪಟ್ಟ ವಿಭಾಗ ಕಛೇರಿಗಳ ಕಾರ್ಯಪಾಲಕ ಅಭಿಯಂತರರು, (ವಿಭಾಗ ಕಛೇರಿಗಳ ಮುಖಾಂತರ ರಾಜ್ಯದ ಉಪ ವಿಭಾಗ ಕಛೇರಿಗಳಿಗೆ)
19. ಆಯುಕ್ತರು, RDW&SD, ಬೆಂಗಳೂರು ಇವರ ಆಪ್ತ ಸಹಾಯಕರಿಗೆ.
20. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಶಾಖೆ, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
21. ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರ ಆಪ್ತ ಸಹಾಯಕರು.
22. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

## ಅನುಬಂಧ–01

ಅಧಿಕೃತ ಜ್ಞಾಪನ ಸಂಖ್ಯೆ: ಗ್ರಾಕುನೀ&ನೈಇ/05/ಲೆಕ್ಕ/2019, ಬೆಂಗಳೂರು, ದಿನಾಂಕ 24–05–2019 ರ ಲಗತ್ತು

ಲೆಕ್ಕ ಶೀರ್ಷಿಕೆ 2215–01–102–9–08 ಬಹುಗ್ರಾಮ ಕುಡಿಯುವ ನೀರು ಯೋಜನೆ (MVS) ಘಟಕದಡಿ ಬಿಡುಗಡೆಮಾಡಲಾದ ರಾಜ್ಯದ ಪಾಲಿನ ಅನುದಾನ

(ರೂ ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ / ವಿಭಾಗ | ಯೋಜನೆ | ಬಿಡುಗಡೆ ಮಾಡಲಾದ ರಾಜ್ಯದ ಪಾಲಿನ ಅನದಾನ |
|---|---|---|---|
| | | | ಎಸ್.ಸಿಪಿ |
| 1 | ದಕ್ಷಿಣಕನ್ನಡ | ಕಿನ್ನಿಗೋಳಿ & ಇತರೆ 17 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರು ಯೋಜನೆ. | 19.60 |
| | ಒಟ್ಟು | | **19.60** |
| 2 | ಮಂಡ್ಯ | ಆದಿಚುಂಚನಗಿರಿ ಮತ್ತು ಇತರೆ 128 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರು ಯೋಜನೆ. | 634.50 |
| | ಒಟ್ಟು | | **634.50** |
| 3 | ಉಡುಪಿ | ಹೆಬ್ರಿ & ಇತರೆ 4 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರು ಯೋಜನೆ. ಹಂತ–02 | 80.03 |
| | | ನಿಟ್ಟೆ – ಬಹುಗ್ರಾಮ ಕುಡಿಯುವ ನೀರು ಯೋಜನೆ. 2ನೇ ಹಂತ | 15.00 |
| | ಒಟ್ಟು | | **95.03** |
| ಒಟ್ಟಾರೆ | | | **749.13** |

ಆಯುಕ್ತರು

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

ಅನುಬಂಧ-02

ಅಧಿಕೃತ ಜ್ಞಾಪನ ಸಂಖ್ಯೆ: ಗ್ರಾಕುನೀ&ನೈಇ/05/ಲೆಕ್ಕ/2019, ಬೆಂಗಳೂರು,
ದಿನಾಂಕ 24-05-2019 ರ ಲಗತ್ತು

ಲೆಕ್ಕ ಶೀರ್ಷಿಕೆ 2215-01-102-9-08 Coverage & Quality ಮತ್ತು WPP
ಘಟಕದಡಿ ಬಿಡುಗಡೆಮಾಡಲಾದ ರಾಜ್ಯದ ಪಾಲಿನ ಅನುದಾನ

(ರೂ ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ / ವಿಭಾಗ | Coverage & Quality | WPP | ಒಟ್ಟು |
|---|---|---|---|---|
| | | ಎಸ್.ಸಿ.ಪಿ | ಟಿ.ಎಸ್.ಪಿ (SCP) | |
| 1 | ಬೆಂಗಳೂರು(ನ) | 0.00 | 2.40 | 2.40 |
| 2 | ದಕ್ಷಿಣಕನ್ನಡ | 3.00 | 0.00 | 3.00 |
| 3 | ಮಂಡ್ಯ | 93.86 | 0.00 | 93.86 |
| 4 | ತುಮಕೂರು | 14.50 | 0.00 | 14.50 |
| 5 | ಉಡುಪಿ | 3.41 | 0.00 | 3.41 |
| ಒಟ್ಟಾರೆ | | **114.77** | **2.40** | **117.17** |

ಆಯುಕ್ತರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.